ಕ್ರಮ ಸಂಖ್ಯೆ	ಕಾಮಗಾರಿಯ ವಿವರ	ಷರಾ
1.	ಕೊಳ್ಳೇಗಾಲದಲ್ಲಿ 220 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ	ಕೆಲಸ ಪ್ರಗತಿಯಲ್ಲಿದೆ.
2.	ಪಿ.ಜಿ. ಪಾಳ್ಯದಲ್ಲಿ 66 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ	ಟೆಂಡರ್ ಹಂತದಲ್ಲಿದೆ
3.	ಮರಟ ಹಳ್ಳಿಯಲ್ಲಿ 66 ಕೆ.ವಿ. ವಿದ್ಯುತ್ ಸಬ್ ಸ್ಟೇಷನ್ನಿನ ನಿರ್ಮಾಣ	ಟೆಂಡರ್ ಹಂತದಲ್ಲಿದೆ

ಇ) ಹೌದು ಗಮನಕ್ಕೆ ಬಂದಿದೆ.

ಈ) ಈ ಹೊಸ ಬಡಾವಣೆಗಳನ್ನು ವಿದ್ಯುದೀಕರಣಗೊಳಿಸಲು ಈಗಾಗಲೇ ಕ್ರಮ ಜರುಗಿಸಲಾಗಿದ್ದು, ಕಾಮಗಾರಿಗಳನ್ನು "ಟರ್ನ್ ಕೀ" ಆಧಾರದಲ್ಲಿ ಕೈಗೊಳ್ಳಲು ನಿರ್ಧರಿಸಲಾಗಿದೆ. ಟೆಂಡರ್ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಟೆಂಡರ್ ಪ್ರಕ್ರಿಯೆಯು ಪೂರ್ಣಗೊಂಡ ನಂತರ ಗುತ್ತಿಗೆದಾರರನ್ನು ಗೊತ್ತುಪಡಿಸಿ ವಿದ್ಯುದೀಕರಣ ಕಾರ್ಯವನ್ನು ಕೈಗೊಳ್ಳಲು ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

651(643) : ಶ್ರೀ ವೆಂಕಟಮುನಿಯಪ್ಪ ಬಿ.ಪಿ. (ಬೇತಮಂಗಲ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಾದ್ಯಂತ ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಸಂಪೂರ್ನ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇವನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ದುರಸ್ತಿಗಾಗಿ ನಿಗದಿಪಡಿಸಿರುವ ಹಣವೆಷ್ಟು;

ಈ) ಅದನ್ನು ಯಾವಾಗ ಪೂರೈಸಲಾಗುವುದು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ರಸ್ತೆಗಳ ಕೆಲವು ಭಾಗಗಳು ದುರಸ್ತಿಪಡಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ,ಈ) ರಸ್ತೆಗಳಲ್ಲಿರುವ ಗುಂಡಿಗಳನ್ನು ಮುಚ್ಚುವ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದ್ದು ಇದಕ್ಕೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿರುತ್ತದೆ ಹಾಗೂ ಈ ಕಾರ್ಯಕ್ರಮವನ್ನು ಸಧ್ಯದಲ್ಲಿ ಪೂರ್ಣಗೊಳಿಸಿ ರಸ್ತೆಗಳನ್ನು ಸುಸ್ಥಿತಿಯಲ್ಲಿ ಇಡಲಾಗುವುದು.

653(871) : ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿದ್ಯುತ್ ಉತ್ಪಾದನೆ ಮಾಡುವ ಸಕ್ಕರೆ ಕಾರ್ಖಾನೆಗಳು ರಾಜ್ಯದಲ್ಲಿ ಎಷ್ಟಿವೆ ಹಾಗೂ ಅವು ಯಾವುವು;

ಆ) ಪ್ರತಿ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ ಪ್ರಮಾಣ ಎಷ್ಟು;

ಇ) ಸಕ್ಕರೆ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್‌ಗೆ ಆಗಲಿರುವ ವೆಚ್ಚ ಎಷ್ಟು ಹಾಗೂ ಸರ್ಕಾರ ಈ ಕಾರ್ಖಾನೆಗಳು ಉತ್ಪಾದಿಸುವ ವಿದ್ಯುತ್ ಖರೀದಿಸಲು ನಿರ್ಬಂಧ ಹೇರಿದೆಯೇ;

ಈ) ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) ಈ ನಿರ್ಬಂಧವನ್ನು ತೆಗೆದು ಹಾಕುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಲಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಅ ಮತ್ತು ಆ

ರಾಜ್ಯದಲ್ಲಿ ಪ್ರಸ್ತುತ ಸಹ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿರುವ 13 ಸಕ್ಕರೆ ಕಾರ್ಖಾನೆಗಳು ವಿದ್ಯುತ್ತನ್ನು ರಫ್ತು ಮಾಡುತ್ತಿವೆ. ಸಹ ವಿದ್ಯುತ್ ಉತ್ಪಾದನಾ ಘಟಕಗಳನ್ನು ಹೊಂದಿರುವ ಅಂತಹ ಸಕ್ಕರೆ ಕಾರ್ಖಾನೆಗಳ ಹೆಸರುಗಳು ಮತ್ತು 2003–04ನೇ ಸಾಲಿನಲ್ಲಿ ಪ್ರತಿಯೊಂದು ಘಟಕದಿಂದ ಖರೀದಿಸಿದ ವಿದ್ಯುತ್ತಿನ ಪ್ರಮಾಣದ ವಿವರಗಳು ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ಸಹ ವಿದ್ಯುತ್ ಉತ್ಪಾದನೆ ಘಟಕವನ್ನು ಹೊಂದಿರುವ ಸಕ್ಕರೆ ಕಾರ್ಖಾನೆಯ ಹೆಸರು	2003–04ನೇ ಸಾಲಿನಲ್ಲಿ ಕರ್ನಾಟಕದ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಖರೀದಿಸಿದ ವಿದ್ಯುತ್ತಿನ ಪ್ರಮಾಣ ದಶಲಕ್ಷ ಯೂನಿಟ್ಟುಗಳಲ್ಲಿ
1.	ಶಾಮನೂರು ಸಕ್ಕರೆ	111.895
2.	ಐ.ಸಿ.ಎಲ್. ಸಕ್ಕರೆ	14.187
3.	ಬನ್ನಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ನಿಯಮಿತ (ಹೆಚ್ಚುವರಿ ಸೇರಿಸಿ)	76.271
4.	ಶ್ರೀ ರೇಣುಕಾ ಸಕ್ಕರೆ ಕಾರ್ಖಾನೆ	45.962
5.	ಶ್ರೀ ಪ್ರಭುಲಿಂಗೇಶ್ವರ ಸಕ್ಕರೆ ಕಾರ್ಖಾನೆ	34.069
6.	ಉಗಾರ್ ಕೋ–ಜನರೇಷನ್ ಪ್ಲಾಂಟ್ (I & II)	55.482
7.	ರೈತರ ಸಹಕಾರಿ ಸಕ್ಕರೆ ಕಾರ್ಖಾನೆ	2.544
8.	ಜಮಖಂಡಿ ಸಕ್ಕರೆ ನಿಯಮಿತ	13.465
9.	ಗೋದಾವರಿ ಸಕ್ಕರೆ ನಿಯಮಿತ	96.095
10.	ಜೆಮ್ ಸಕ್ಕರೆ ಕಾರ್ಖಾನೆ	27.590
11.	ದಾವಣಗೆರೆ ಸಕ್ಕರೆ ಕಂಪನಿ ನಿಯಮಿತ	1,687
12.	ದೂದ್ ಗಂಗಾ ಕೆ.ಎಸ್.ಎಸ್.ಕೆ.ಎಸ್.	–
13.	ಎಸ್.ಸಿ.ಎಂ. ಸಕ್ಕರೆ	–
	ಒಟ್ಟು	**479,227**

ಟಿಪ್ಪಣಿ : ಸಕ್ಕರೆ ಕಾರ್ಖಾನೆಗಳು ಉತ್ಪಾದನೆ ಮಾಡುವ ಒಟ್ಟು ವಿದ್ಯುತ್ತಿನ ಪ್ರಮುಖಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಮಾನಿಟರ್ ಮಾಡುತ್ತಿಲ್ಲ.

ಇ,ಈ) ವಿದ್ಯುತ್ ಉತ್ಪಾದನೆಗೆ ತಗಲುವ ವೆಚ್ಚವು ವಿದ್ಯುತ್ ಉತ್ಪಾದಕರಿಗೆ ಮಾತ್ರ ತಿಳಿದಿರುತ್ತದೆ. ಸಾಮಾನ್ಯವಾಗಿ, ವಿದ್ಯುತ್ ಜಾಲಕ್ಕೆ ವಿದ್ಯುತ್ ಪೂರೈಸಲು ಈ ಸಕ್ಕರೆ ಕಾರ್ಖಾನೆಗಳಿಗೆ ಯಾವುದೇ ನಿರ್ಭಂದ ಇರುವುದಿಲ್ಲ. ಆದಾಗ್ಯೂ ರಾತ್ರಿ ವೇಳೆಯಲ್ಲಿ ವಿದ್ಯುತ್‌ನ ಬೇಡಿಕೆಯು ಕಡಿಮೆ ಇರುವುದರಿಂದ. ಹೆಚ್ಚಿನ ವೋಲ್ಟೇಜ್ ಮತ್ತು ಹೆಚ್ಚಿನ ಫ್ರೀಕ್ವೆನ್ಸಿಗಳನ್ನು ನಿಯಂತ್ರಿಸುವ ಹಾಗು ವಿದ್ಯುತ್ ಜಾಲದ ಸ್ಥಿರತೆಯನ್ನು ಕಾಪಾಡುವ ದೃಷ್ಟಿಯಿಂದ ರಾತ್ರಿಯ ಸಮಯವಾದ 11 ಗಂಟೆಯಿಂದ ಮಾರನೇ ದಿನ ಬೆಳಿಗ್ಗೆ 7 ಗಂಟೆವರೆಗೆ ತಮ್ಮ ವಿದ್ಯುತ್ ಉತ್ಪಾದನೆಯ ಶೇಕಡ 60ರಷ್ಟಕ್ಕೆ ವಿದ್ಯುತ್ ರಫ್ತನ್ನು ದಿನಾಂಕ 18–6–2004 ರಿಂದ ಸೀಮಿತಗೊಳಿಸಲು ಸಹ ವಿದ್ಯುತ್ ಉತ್ಪಾದಕಾ ಘಟಕಗಳಿಗೆ ತಿಳಿಸಲಾಗಿದೆ.

ಉ) ಇದನ್ನು ಸರ್ಕಾರವು ಪರಿಶೀಲಿಸುತ್ತದೆ.

654(674) : ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನೇಕ ವರ್ಷಗಳಿಂದ ಕುಂಠಿತಗೊಂಡಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಯಾವುವು;

ಆ) ಈ ಯೋಜನೆಗಳು ಯಾವಾಗ ಆರಂಭವಾಗಿವೆ ಹಾಗೂ ಯಾವಾಗ ಮುಗಿಯಬೇಕಾಗಿತ್ತು;

ಇ) ಈಗಿನ ಪ್ರಕಾರ ಯಾವಾಗ ಮುಗಿಯಲಿದೆ; (ವಿವರಗಳನ್ನು ಯೋಜನೆವಾರು ನೀಡುವುದು)

ಈ) ಸದರಿ ಯೋಜನೆಗಳಿಗೆ ಆರಂಭದಲ್ಲಿ ಮಾಡಿದ್ದ ಅಂದಾಜು ಎಷ್ಟು ಹಾಗೂ ಈಗಿನ ಪರಿಷ್ಕೃತ ಅಂದಾಜು ಎಷ್ಟು (ಯೋಜನಾವಾರು ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನೇಕ ವರ್ಷಗಳಿಂದ *ಕುಂಠಿತಗೊಂಡಿರುವ ಭಾರಿ ನೀರಾವರಿ ಯೋಜನೆಗಳ ಸಂಖ್ಯೆ 20 ಹಾಗೂ* ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ 18 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಯೋಜನೆಗಳ ಆರಂಭಿಕ ಹಾಗೂ ಮುಗಿದ/ಮುಗಿಯಬೇಕಾಗಿದ್ದ ವರ್ಷದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಯೋಜನಾವಾರು ಅಂದಾಜು ಮತ್ತು ಪರಿಷ್ಕೃತ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.